Regd No BG 155

— ಶ್ರೀ —

2—3—1962

Sri "SATYAVADI"
— DAILY —
MYSORE 4
46 th Year

# ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬೆಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

## ಮೆಸೂರು ಮಂತಿಮಂಡಲ ರಚನೆ ಬಗ್ಗೆ ಮಾತುಕತೆ

ವಿಧಾನ ಸಭೆಗೆ ಹೊಸದಾಗಿ ಆಯ್ಕೆ ಆಗಿರುವ ಕಾಂಗ್ರೆಸು ಸದಸ್ಯರ ಹಾಗೂ ಹಾಲಿ ವಿಧಾನ ಸಭೆಯ ಕಾಂಗ್ರೆಸು ಸದಸ್ಯರೊಳಗೊಂಡ ಶಾಸನ ಸಭೆ ಕಾಂಗ್ರೆಸು ಪಕ್ಷದ ಸದಸ್ಯರ ಸಭೆಯನ್ನು ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಈ ಮಾಹೆ 7 ನೆಯ ತಾ|| ಕರೆದಿರುವರೆದ ಬೆಂಗಳೂರಿನಿಂದ ಒಂದು ವಿಶೇಷ ತಿಳಿಸತ್ರದೆ ಸಭೆ ನಾಯಕರನ್ನು ಚುನಾಯಿಸುವದು ಮಂತ್ರಿ ಮಂಡಲ ರಚಿಸುವಂತೆ ಅವರಿಗೆ ರಾಜ್ಯಪಾಲರು ಆಹ್ವಾನಿಸುವರು ಮುಖ್ಯ ಮಂತ್ರಿ ಜತ್ತಿಯವರು ಕಾಂಗ್ರೆಸು ಹೈಕಮಾಂಡಿನೊಡನೆ ಸಂಪರ್ಕ ಹೊಂದಿರುವರು. ಕಾಂಗ್ರೆಸು ಅಧ್ಯಕ್ಷ ಶ್ರೀ ಸಂಜೀವರೆಡ್ಡಿಯವರು ನಿಜಲಿಂಗಪ್ಪನವರೊಡನೆ ಸಂಪರ್ಕ ಹೊಂದಿರುವರು. ನಿಜಲಿಂಗಪ್ಪನವರಿಗೆ ಸ್ಥಾನವನ್ನು ಬಿಟ್ಟು ಕೊಡಲು ವಿಧಾನ ಸಭೆಯ ಸದಸ್ಯರೇ ಕರು ಮುಂದಾಗಿದ್ದಾರೆ

೦೦

ಮೈಸೂರು ಮಂತ್ರಿ ಮಂಡಲ ಬಗ್ಗೆ ಹೈಕಮಾಂಡಿನೊಡನೆ ಮಾತುಕತೆ ನಡೆಸಲು ಕಾಂಗ್ರೆಸು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ನಾಳೆಯೊಳಗೆ ದೆಹಲಿಯಲ್ಲಿರುವರು.

### ಶಿಖರ ಹತ್ತಲು ಅನುಮತಿ

ನೇಪಾಳದ 25 ವರ್ಷದ ಅಡಿಗಳ ಎತ್ತರದ ನಪ್ಸೆ ಶಿಖರವನ್ನು ಹತ್ತುವ ಪ್ರಯತ್ನ ಮಾಡಲು ಜಪಾನ ವಿಶ್ವವಿದ್ಯಾನಿಲಯದ ತಂಡಕ್ಕೆ ನೇಪಾಳದ ವಿದೇಶ ಖಾತೆ ಅನುಮತಿ ನೀಡಿದೆ.

೦೦

ಮೇಲಿನ ಈಜಿಪ್ಟಿನಲ್ಲಿ ಹೋಟಲೊಂದು ಮೊನ್ನೆ ಕುಸಿದು 40 ಮಂದಿ ಮರಣ ಹೊಂದಿದರು

## ಮತ್ತೆ ಮತದಾನ ಸಾಧ್ಯವಿಲ್ಲ

ಪಂಜಾಬಿನ ಮುಖ್ಯ ಮಂತ್ರಿ ಶ್ರೀ ಪ್ರತಾಪಸಿಂಗ್ ಕೈರಾನರು ಆಯ್ಕೆ ಆಗಿರುವ ಸಂತ್ಹಾಲಿ ಚುನಾವಣೆ ಕ್ಷೇತ್ರದಲ್ಲಿ ಮತ್ತೆ ಮತದಾನ ನಡೆಯಬೇಕೆಂಬ ವಿರೋಧ ಪಕ್ಷದವರ ಪ್ರಯತ್ನ ನಡೆಯಲಾರದೆಂದು ನವದೆಹಲಿ ವಾರ್ತೆ. ಚುನಾವಣೆ ನಡೆಯಬೇಕೆಂದು ಅಕಾಲಿದಳ ನಾಯಕ ಮಾಸ್ಟರ್ ತಾರಾಸಿಂಗ್, ಸ್ವತಂತ್ರ ಪಕ್ಷದ ಶ್ರೀ ಉದ್ದಾವು ಸಿಂಗ್ ಕಮ್ಯೂನಿಸ್ಟ್ ಪಕ್ಷದ ಶ್ರೀ ಹರಿಕಿಷನ್ ಸಿಂಗ್ ಸುರೀತ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಕೃಪಾಲ ಸಿಂಗರು ಚುನಾವಣೆ ಕಮಿಷನರಂತಾದ ಶ್ರೀ ಕೆ ವಿ ಕೆ ಸುಂದರಂರನ್ನು ನಿನ್ನೆ ಭೇಟಿಮಾಡಿದ್ದರು. ಮರು ಚುನಾವಣೆ ನಡೆಯದಿದ್ದರೆ ಚುನಾವಣೆಯು ಮೂಲಕ ಈ ಸರಕಾರವನ್ನು ಬದಲಾಯಿಸಲಾಗುವದಿಲ್ಲ ಎಂಬಂತೆ ಆಗುವದು ಎಂದು ಮಾಸ್ಟರ್ ತಾರಾಸಿಂಗರು ತಿಳಿಸಿದರು.

### ಪರಿಶೀಲನಾ ಸಮಿತಿ

ಒರಿಸ್ಸಾ ರಾಜ್ಯದಲ್ಲಿ ಕಳೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಸರಕಾರಿಯಂತ್ರವನ್ನು ಉಪಯೋಗಿಸಲಾಯಿತೆಂದು ವಿರೋಧ ಪಕ್ಷ ಮಾಡಿರುವ ಆರೋಪದ ಪರಿಶೀಲನೆಗೆ. ಒರಿಸ್ಸಾ ವಿಧಾನ ಸಭೆಯ ಪ್ರಜಾ ಸೋಷಲಿಸ್ಟ್ ಪಕ್ಷದನಾಯಕ ಶ್ರೀ ಪ್ರಸನ್ನ ಕುಮಾರ ದಾಸರ ಏಕ ಸದಸ್ಯ ಸಮಿತಿ ರಚಿತವಾಗಿದೆ.

——

ಗೋವಾ, ದಿಯು, ಡಾನ್ ಗಳಿಗೆ ಕಾನೂನು ಮಾಡಲು ಭಾರತ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಲಿದೆ.

## ಸತ್ಯಾಗ್ರಹ ಸಮಂದ ಬೆದರಿಕೆ

ಮೈಸೂರು ವಿಧಾನ ಸಭೆಯ ಸಾಮಾನ್ಯ ಸಭೆಯಲ್ಲಿ ಮೊನ್ನೆ ಕಾಂಗ್ರೆಸು ಪಕ್ಷದ ಡಾ|| ಬಿ ಜಿ ದಾಸರು ಮಾತನಾಡುತ್ತ, ಇನ್ನೊಂದುವರೆ ತಿಂಗಳಿನಲ್ಲಿ ಆಹಾರ ಧಾನ್ಯದ ಬೆಲೆ ಇಳಿತಾಯುವಾಗಬೇಕು, ಇಲ್ಲವೇ ಮೈಸೂರಿನ ಜನ ಸತ್ಯಾಗ್ರಹ ಸಮರ ಹೂಡುವರು ಎಂದು ನುಡಿದರು ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವನ್ನು ಅವರು ಪ್ರಸ್ತಾಪಿಸಿ, ಭಾರತ ಸರ್ಕಾರ ಕಳೆದ ವರ್ಷ ಗ್ರಾಂಟು ಕೊಟ್ಟಿದ್ದು ಲಾಪ್ಸು ಆಯಿತು. ಅಜಿಯುರ್ವೇದದ ಬಗ್ಗೆ ಸರ್ಕಾರಿ ಮಲತಾಯಿ ಧೋರಣೆ ತಳೆದಿರುವದು ಅನ್ಯಾಯ ಎಂದು ನುಡಿದರು.

೦೦

ಲಕ್ನೋದಿಂದ ಬಂದಿರುವ ವಾರ್ತೆಯ ಪ್ರಕಾರ, ಜನಸಂಘದ ಅತಲ್ ಬಿಹಾರಿ ವಾಜಪೇಯಿಯವರ ಕೇಳಿಕೆಯಂತೆ ಮತಗಳನ್ನು ಮತ್ತೆ ಎಣಿಕೆಮಾಡುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಆಗಿದೆ ಬಲರಾಮಪುರ ಕ್ಷೇತ್ರದಲ್ಲಿ ಈಗ ಕಾಂಗ್ರೆಸಿನ ಶ್ರೀಮತಿ ಸುಭದ್ರ ಜೋಷಿ ಗೆದ್ದಿರುವರು.

ಭಾರತದ ಕೈಗಾರಿಕಾ ಕಾರ್ಪೊರೇಷನ್ನಿಗೆ ವಿಶ್ವಬೇಂಕು 20 ವಿಲಿಯ ಡಾಲರ ಸಾಲವಿತ್ತಿದೆ

ಬೆಂಗಳೂರು— ಮಾರ್ಚ್ 1 ರಿಂದ ಜಾರಿಗೆ ಬರುವ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನು, ಹುಬ್ಬಳ್ಳಿ ಮತ್ತು ಧಾರವಾಡಗಳ ವಾಸಿಸಿಪಾಲಿಟಿಗಳನ್ನೂ, ಅವೆರಡನ್ನು ಸೇರಿಸುವ ರಸ್ತೆಯನ್ನೂ ಒಳಗೊಂಡಿರುವುದು : ಈ ನೂತನ ಕಾರ್ಪೊರೇಷನ್ನಿನ ಉತ್ಪತ್ತಿ ವರ್ಷಕ್ಕೆ ರೂ. 65 ಲಕ್ಷ ನಿರೀಕ್ಷಿಸಲ್ಪಟ್ಟಿದೆ.

ಕೇರಳ ವಿಧಾನ ಸಭೆಯಲ್ಲಿ ನಿನ್ನೆ ಮುಸ್ಲಿಂ ಲೀಗಿನವರೋರ್ವರು ರಾಜ್ಯದ ನ್ಯಾಯಾಂಗವನ್ನು ಟೀಕೆ ಮಾಡಿದಾಗ, ಆ ರೀತಿ ಟೀಕೆ ಮಾಡಕೂಡದೆಂದು ಸ್ಪೀಕರಾದ ಅಲೆಕ್ಸಾಂಡರ್ ಪಾರಂಭಿಕರಿಗೆ ತಿಳಿಸಿದರು.

## ಮಾವನ ಸೋಲು

ಮಹಾರಾಷ್ಟ್ರದ ಒನ್ಗರ್ ಕ್ಷೇತ್ರದಿಂದ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಶ್ರೀ ಎ ಎಸ್ ಪಾಲುಸ್ಕರ್ ಕಾಂಗ್ರೆಸಿನ ಸ್ಪರ್ಧೆ ತಮ್ಮ ಮಾವ ಶ್ರೀ ಟಿ ಎಸ್ ಮೋರೆಯವರನ್ನು ವಿಧಾನ ಸಭೆ ಚುನಾವಣೆಯಲ್ಲಿ ಸೋಲಿಸಿದರು

೦೦

ಪಾಕಿಸ್ತಾನದ ರಾಜ್ಯಾಂಗಕ್ಕೆ ಅಧ್ಯಕ್ಷ ಅಯೂಬರು ನಿನ್ನೆ ಸಹಿ ಮಾಡಿದರೆಂದು ಕರಾಚಿ ವಾರ್ತೆ ಅದು ಅಧ್ಯಕ್ಷ ಆಡಳಿತದ ರಾಜ್ಯಾಂಗ. ರಾಜಕೀಯ ಪಕ್ಷಗಳಿಗೆ ಅಲ್ಲಿ ಅವಕಾಶ ಇಲ್ಲ.

ಅಧ್ಯಕ್ಷ ಕೆನೆಡಿಯವರು, ಕಾಂಗ್ರೆಸು ಪಕ್ಷದ ಗೆಲುವಿಗೆ ಪಂ|| ನೆಹರುರವರಿಗೆ ಸಂದೇಶ ಕಳಿಸಿರುವ ಒಗ್ಗೆ ಸ್ವತಂತ್ರ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಆರ್ ಮಸಾನಿ ಪ್ರತಿಭಟಿಸಿರುವರೆಂದು ಬೊಂಬಾಯಿ ವಾರ್ತೆ. ನಮ್ಮ ಪ್ರಜಾತ್ಯವಹಾರದಲ್ಲಿ ಪಕ್ಷಗಳ ಕಡೆ ವಾಲುವದರಲ್ಲಿ ಈ ಸಂದೇಶ ಇದೆ ಎಂದು ಅವರು ತಿಳಿಸಿರುವರು

ಒರಿಸ್ಸಾ ವಿಧಾನ ಸಭೆಯಲ್ಲಿ 62-63 ನೆಯ ಸಾಲಿನ ಅಂದಾಜು ಪಟ್ಟಿಯನ್ನು ಮುಖ್ಯ ಮಂತ್ರಿ ಶ್ರೀ ಬಿಜಯೋನಂದ ಪಾಟ್ನಾಯಕರು ಮಂಡಿಸಿದರು. ಅಂದಾಜಪಟ್ಟಿಯಲ್ಲಿ ರೂ 85-6 ಲಕ್ಷ ಇಳಿವರಿ ಒಂದಿದೆ.

ಇಂಗ್ಲೀಷು ಭಾಷೆಯು ಒಂದು ವರ್ಷದ ಡಿಪ್ಲೊಮಾ ಶಿಕ್ಷಣ ಆರಂಭಿಸಲು ಕೇರಳ ವಿಶ್ವವಿದ್ಯಾನಿಲಯ ನಿರ್ಧರಿಸಿದೆ ಎಂದು ತಿರುವೇಂದ್ರಂ ವಾರ್ತೆ.

ಲೋಕಸಭೆಯಲ್ಲಿ ಕಾಂಗ್ರೆಸಿಗೆ ಭಾರಿ ಬಹುಮತ ಸಿಕ್ಕಿದೆ

ಶ್ರೀ ಎಸ್ ನಿಜಲಿಂಗಪ್ಪನವರೆಡ್ಡಿ ಆಂಧ್ರದ ಮುಖ್ಯ ಮಂತ್ರಿ ಆಗುವರು

### ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಜೋಯಿಸರಿಂದ
3 ದ್ವಾದಶಿ ಉತ್ತರಾಷಾಢ

## ವಾರ್ತಾವಿಶೇಷಗಳು

ವೈಸ್‌ರಾಯ್— ಪಾರ್ಲಿಮೆಂಟ್ ಸಭೆಯು ಮುಂದುವರಿದ ವಿಂಟರ್ ಸೆಷನ್ ಮಾರ್ಚ್ 5 ನೇ ಮಂಗಳವಾರ ಸಂಜೆ 4 ಗಂಟೆಗೆ ನಡೆಯುವುದು.

ಕಲ್ಕತ್ತಾ— ಈಚೆಗೆ ಪಶ್ಚಿಮ ಜರ್ಮನಿಯಲ್ಲಾದ ನೆರೆಹಾವಳಿಯಲ್ಲಿ ನೊಂದವರ ಸಹಾಯಾರ್ಥವಾಗಿ ಟೀ ಬೋರ್ಡಿನವರು ಹ್ಯಾಂಬರ್ಗಿಗೆ ವಿ ಮಾನ ಮೂಲಕ ಸುಮಾರು 3000 ಪೌಂಡು ಡಾರ್ಜಲಿಂಗ್ ಟೀಯನ್ನು ಕಳುಹಿಸಲು ನಿರ್ಧರಿಸಿದ್ದಾರೆ.

ಕೊಯಮತ್ತೂರು— ಡಿ ಎಂ ಕೆ ಯವರು ದ್ರವಿಡನಾಡಿನ ಕೇಳಿಕೆ ಬಗ್ಗೆ ಪುನರಾಲೋಚಿಸಲೆಂದು ಮಂತ್ರಿ ಸುಬ್ರಹ್ಮಣ್ಯಂ ಒತ್ತಾಯ ಮಾಡಿರುವರು : ತಮಿಳುನಾಡಿನ ಅಭಿವೃದ್ಧಿಗೆ ಈ ಪ್ರತ್ಯೇಕತೆಯು ಅವಶ್ಯಕವಿಲ್ಲವೆಂದೂ ಅವರು ಹೇಳಿರುವರು.

ಇಂಗ್ಲೀಷು ಭಾಷೆ ಬೋಧಿಸುವದಂಲ್ಲಿ ಪರಿಣತರಾದ ಎ ಎಚ್ ಹಾಂಜಿ ಹೈದರಾಬಾದಿನಿಂದ ಈ ದಿನ ಮದ್ರಾಸಿಗೆ ಬಂದರು. ಮದ್ರಾಸಿನಲ್ಲಿ ಅವರು 10 ದಿವಸಗಳ ಕಾಲವಿದ್ದು ಇಂಗ್ಲೀಷುಭಾಷೆ ಬೋಧನೆ ಪ್ರಚಾರ ವೀಕ್ಷಣೆ ಮತ್ತಿತ ರೆ ಸಮ್ಮೇಳನಗಳಲ್ಲಿ ಭಾಗವಹಿಸುವರು.

---

### ವಿನೋದ

ಅಮೇರಿಕಾದಲ್ಲಿ ಈ ಒಂದು ತಮಾಷೆ ವಿಷಯವು ಪ್ರಕಟವಾಗಿದೆ— ರಷ್ಯದವನೊಬ್ಬನು ಸ್ಟಾಲಿನ್‌ರಿಗೆ ಅವರ ಜನ್ಮದಿನದಂದು ನವಿರಾದ ಬಟ್ಟೆಯ ಒಂದು ಸೂಟಿಳಿಯನ್ನು ಉಡುಗರೆಯಾಗಿ ಕೊಟ್ಟನು ; ಸ್ಟಾಲಿನ್ನನ ದರ್ಜಿಯು, ಅದನ್ನು ಬಿಡಿಸಿ, ಅಳತೆ ನೋಡಿ, ಒಂದು ಚಲ್ಲಣಕ್ಕೆ ಬೇಕಾಗುವಷ್ಟು ಬಟ್ಟೆ ಇರುವುದಾಗಿ ಹೇಳಿದನು. ಸ್ಟಾಲಿನ್ನನು ಆ ಬಟ್ಟೆಯನ್ನು ಮಾಸ್ಕೋ ನಗರದ ಒಬ್ಬ ದರ್ಜಿಗೆ ಕಳುಹಿಸಿದಾಗ, ಆ ದರ್ಜಿಯು : ಈ ಬಟ್ಟೆಯಿಂದ ಒಂದು ಚಲ್ಲಣ, ಒಂದು ಕೋಟು ಮತ್ತು ಒಂದು ಸಡುವಂಗಿಯನ್ನು ಮಾಡಬಹುದೆಂದು ಹೇಳಿದನು ಸ್ಟಾಲಿನ್ನನು ಅಲ್ಲಿಯೂ ಸಮಾಧಾನಪಡದೆ, ಬಟ್ಟೆಯನ್ನು ಲಂಡನ್ನಿನ ಒಬ್ಬ ದರ್ಜಿಗೆ ಕಳುಹಿಸಿಲು ಆ ದರ್ಜಿಯು : ಈ ಬಟ್ಟೆಯಿಂದ ಒಂದು ಕೋಟು, ಒಂದು ಸಡುವಂಗಿ, ಮತ್ತು ಎರಡು ಚಲ್ಲಣಗಳನ್ನು ಹೊಲಿಯಬಹುದು' ಎಂದು ತಿಳಿಸಿದನು ಈ ಮೂವರು ದರ್ಜಿಗಳ ಮೂರು ಪ್ರಕಾರದ ಅಂದಾಜುಗಳಲ್ಲಿ ಅಷ್ಟೊಂದು ತಾರತಮ್ಯವೇನೆಂದು ಕಾರಣವನ್ನು ಕೇಳಿದಾಗ, ಲಂಡನ್ ದರ್ಜಿ ಹೇಳಿದನಂತೆ— 'ಅದನ್ನು ಏವರಿಸುವುದು ಸುಲಭ ; ನೀವು ಮಾಸ್ಕೋ ನಗರದಿಂದ ಎಷ್ಟು ದೂರ ಹೋಗಿದಿರೋ ಅಷ್ಟು ಕಣ್ಣಗಲಗಿದಿರಿ'.

Our Bangalore Sales Depot address—

71/4 Arcot Sreenivasachar St., Bangalore 2.

ವುಡ್‌ಲಾಂಡ್ಸ್ ಕೀರ್ತಿಯುತ 4 ನೇ ವಾರ

.... ನೋಡಿದವರೆಲ್ಲಾ ಪ್ರಶಂಸಿಸುತ್ತಿರುವ ಅಪೂರ್ವ ಚಿತ್ರ ವಸ್ತು ....

ಜಂಗ್ಲಿ (ಹಿಂದಿ) Junglee

ನಟವರ್ಗ— ತಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ ದಿನವಹಿ 3 ಪ್ರದರ್ಶನಗಳು ]

ಒಪೆರಾ— ಜಯಪ್ರದ 2 ನೇ ವಾರ

ಮೋಹಿನಿ ರುಕ್ಮಾಂಗದ

[ ಏಕಾದಶಿ ಮಹಾತ್ಮೆ ] ( ಕನ್ನಡ )

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ ದಿನವಹಿ 3 ಆಟಗಳು ]

SHAKTI SUDHA

A Superb Tonic

Help The 'Gorakshana'

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.



ಬೆಂಗಳೂರು— ದರ್ಜಿ ಶಾಲೆಯನ್ನು ಮಗಳಿಗೆ ವಿಭಾಗ


Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.